ಹೊಸದಾಗಿ ಮಂಜೂರು ಮಾಡಲಾಗುವುದಿಲ್ಲವಾದ್ದರಿಂದ ಈ ಪ್ರಸ್ತಾವನೆಯನ್ನು ಈ ಸಾಲಿನಲ್ಲಿ ಪರಿಗಣಿಸಲು ಸಾಧ್ಯವಿರುವುದಿಲ್ಲ.

ಉನ್ನತ ಶಿಕ್ಷಣ ಪಡೆದ ವೈದ್ಯರು ಸರ್ಕಾರಿ ಸೇವೆಯನ್ನು ತ್ಯಜಿಸುತ್ತಿರುವುದು

282 (3283), ಶ್ರೀ ಪಿಳ್ಳ ಮುನಿಶಾಮಪ್ಪ (ದೇವನಹಳ್ಳಿ)

ಅ) ಉನ್ನತ ಶಿಕ್ಷಣಕ್ಕಾಗಿ ವೈದ್ಯರು ಸರ್ಕಾರದ ಸವಲತ್ತುಗಳನ್ನು ಪಡೆದು ತದನಂತರ ಸರ್ಕಾರಿ ಸೇವೆಯನ್ನು ತ್ಯಜಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ;

ಆ) ಸರ್ಕಾರಿ ಸೇವೆಯಲ್ಲಿರುವ ವೈದ್ಯರು ಖಾಸಗಿ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದು ಹಾಗೂ ಸ್ವಂತ ನರ್ಸಿಂಗ್ ಹೋಮ್ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಇಂತಹ ವೈದ್ಯರುಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ (ವಿವರವನ್ನೊದಗಿಸುವುದು)?

ಶ್ರೀ ಯು.ಟಿ.ಖಾದರ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಬಂದಿದೆ.

46 ಸೇವಾನಿರತ ವೈದ್ಯರುಗಳು ಸ್ನಾತಕೋತ್ತರ ವ್ಯಾಸಂಗದ ನಂತರ ಗೈರು ಹಾಜರಿಯಾಗಿರುತ್ತಾರೆ.

ಸರ್ಕಾರದ ನಿಯಮದ ಪ್ರಕಾರ ಸೇವಾನಿರತ ವೈದ್ಯರುಗಳು ಸ್ನಾತಕೋತ್ತರ ವ್ಯಾಸಂಗದ ನಂತರ 10 ವರ್ಷಗಳ ಕಾಲ ಇಲಾಖೆಯಲ್ಲಿ ಕಾರ್ಯನಿರ್ವಹಿಸಬೇಕೆಂಬ ನಿಯಮವಿದ್ದು, ನಿಯಮದಂತೆ ವ್ಯಾಸಂಗಕ್ಕೆ ತೆರಳುವ ಪೂರ್ವದಲ್ಲಿ ವ್ಯಾಸಂಗದ

ನಂತರ 10 ವರ್ಷಗಳ ಕಾಲ ಇಲಾಖೆಯಲ್ಲಿ ಕಾರ್ಯನಿರ್ವಹಿಸುವುದಾಗಿ ಷರತ್ತನ್ನು ಒಪ್ಪಿ ಬಂಧಪತ್ರ (Bond Paper) ವನ್ನು ನೀಡಬೇಕಾಗುತ್ತೆ. ಇಲಾಖೆಯಲ್ಲಿ 10 ವರ್ಷಗಳ ಕಾಲ ಸೇವೆ ಸಲ್ಲಿಸಿದೆ ಇದ್ದ ಪಕ್ಷದಲ್ಲಿ, ವೈದ್ಯರಿಗೆ ಸ್ನಾತಕೋತ್ತರ ವ್ಯಾಸಂಗದ ಸಮಯದಲ್ಲಿ ನೀಡಲ್ಪಟ್ಟ ವೇತನ ಮತ್ತು ಭತ್ಯೆಗಳು, ಡಿಎ, ಸ್ಟೈಪೆಂಡ್, ಭೋದನಾ ಶುಲ್ಕ ಮತ್ತು ಪೆನಾಲ್ಟಿ ಮೊತ್ತ ಸೇರಿದಂತೆ ಒಟ್ಟಾರೆ ಮೊತ್ತಕ್ಕೆ ಬಡ್ಡಿಯನ್ನು ವಿಧಿಸಿ ವಸೂಲು ಮಾಡಲಾಗುತ್ತದೆ. ಈ ಕ್ರಮ ವಿಫಲವಾದರೆ ಕರ್ನಾಟಕ ವೈದ್ಯಕೀಯ ಪರಿಷತ್ತಿನಲ್ಲಿ ನೊಂದಾಯಿಸಿರುವ ತಜ್ಞತೆಯ ವಿದ್ಯಾರ್ಹತೆಯನ್ನು ರದ್ದುಪಡಿಸಲು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿ ನಿಯಮಾನುಸಾರ/ಕಾನೂನು ಪ್ರಕಾರ ಕ್ರಮ ಜರುಗಿಸಲಾಗುವುದು.

ಆ) ವೈದ್ಯರು ಖಾಸಗಿ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದು ಹಾಗೂ ಸ್ವಂತ ನರ್ಸಿಂಗ್ ಹೋಂ ನಡೆಸುತ್ತಿರುವುದರ ಬಗ್ಗೆ ಯಾವುದೇ ದೂರು ಸ್ವೀಕೃತಗೊಂಡಿರುವುದಿಲ್ಲ.

ಸರ್ಕಾರಿ ಸೇವೆಯಲ್ಲಿರುವ ವೈದ್ಯರು ಆಸ್ಪತ್ರೆಯ ದೈನಂದಿನ ಕೆಲಸ ಕಾರ್ಯ ಮುಗಿದ ನಂತರ ಹಾಗೂ ಆಸ್ಪತ್ರೆಯ ರೋಗಿಗಳಿಗೆ ಯಾವುದೇ ಅನಾನುಕೂಲವಾಗದಂತೆ ಒಂದು ಖಾಸಗಿ ನರ್ಸಿಂಗ್ ಹೋಮ್ ಅಥವಾ ಕ್ಲಿನಿಕ್‌ನಲ್ಲಿ ಆಪ್ತ ಸಲಹೆಗಾರರಾಗಿ ಕರ್ತವ್ಯ ನಿರ್ವಹಿಸಬಹುದಾಗಿದೆ. ಆದರೆ ಸರ್ಕಾರಿ ಸೇವೆಯಲ್ಲಿರುವ ವೈದ್ಯರು/ತಜ್ಞರು ಸ್ವಂತ ನರ್ಸಿಂಗ್ ಹೋಮ್ ಅಥವಾ ಕ್ಲಿನಿಕ್ ಹೊಂದಿರಬಾರದು.